**ದಿನಾಂಕ:22-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಎ.ಸಿ.ಹೆಚ್. ರವರಿಂದಃ-**

ದಾವಾ ಸ್ವತ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ನಾನೇ ಮಾಲೀಕಳಾಗಿದ್ದೇನೆ ಎನ್ನುತ್ತಾರೆ. ದಾವಾ ಸ್ವತ್ತಿನ ಮಾಲೀಕರು ರವಿ ಲಕ್ಷ್ಮಣ್ ಧರಣಟ್ಟಿ ಎಂದರೆ ಸರಿಯಲ್ಲ. ನಾನು ಪಿ.ಹೆಚ್.ಡಿ ಪಧವೀದರೆ. ನೀವು ಎಲ್ಲಿ ವಾಸವಿದ್ದೀರಿ ಎಂದರೆ ಸಾಕ್ಷಿ ನಾನು ಬೆಳಗಾವಿಯಲ್ಲೂ ಇರುತ್ತೇನೆ, ಬೆಂಗಳೂರಿನಲ್ಲೂ ಇರುತ್ತೇನೆ ಎನ್ನುತ್ತಾರೆ. ನಾನು ಬೆಳಗಾವಿಯ ರಹವಾಸಿ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ದಾಖಲೆಗಳು ಇವೆ ಎನ್ನುತ್ತಾರೆ . ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ರೇಷನ್ ಕಾರ್ಡ್ ಇದೆ ಎನ್ನುತ್ತಾರೆ . ಆರ್.ಎಸ್.ನಂ.23/1 ಪೀರನವಾಡಿ ಗ್ರಾಮಕ್ಕೆ ಸೇರುತ್ತದೆ ಎಂದರೆ ಸರಿ . ಆರ್.ಎಸ್.ನಂ.23/1 ಗ್ರಾಮಠಾಣಾದಲ್ಲಿ ಬರುತ್ತದೆ ಎಂದರೆ ಸರಿ. ಆ ಪ್ರದೇಶದಲ್ಲಿ ಜನತಾ ಮನೆಗಳು ಇವೆ ಎಂದರೆ ಸರಿಯಲ್ಲ, ಸಾಕ್ಷಿ ನಾವು ಮಾಲೀಕರಿಂದ ನಿವೇಶನಗಳನ್ನು ಖರೀದಿಸಿ ಮನೆಗಳನ್ನು ಕಟ್ಟಿದ್ದೇವೆ, ಸರ್ಕಾರದಿಂದ ಮನೆಗಳನ್ನು ಕಟ್ಟಿಕೊಡಲಾಗಿಲ್ಲ ಎನ್ನುತ್ತಾರೆ.

**2.** ದಾವಾ ಸ್ವತ್ತನ್ನು ಎಷ್ಟು ಹಣಕ್ಕೆ ಮಾಲೀಕರಿಂದ ಖರೀದಿಸಿದ್ದೇನೆ ಎಂದು ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ , ಆದರೆ ಖರೀದಿ ಹಣ 56,000/- ಎನ್ನುತ್ತಾರೆ. ಆರ್.ಎಸ್.ನಂ.23/1 ಸಂಪೂರ್ಣ ಶೇತಕಿ ಜಮೀನು ಎಂದರೆ ಸರಿಯಲ್ಲ . ದಾವಾ ಸ್ವತ್ತನ್ನು ಈವರೆಗೂ ಸರ್ವೆ ನಂಬರಿನಿಂದ ಗುರುತಿಸಲಾಗುತ್ತದೆ ಎಂದರೆ ಸರಿ . ಜಮೀನಿನ ಮಾಲೀಕರು ಆರ್.ಎಸ್.ನಂ.23/1 ನ್ನು ಕೃಷಿಯೇತರ ಜಮೀನಾಗಿ

ಪರಿವರ್ತಿಸಿಕೊಂಡಿಲ್ಲ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ . ಆರ್.ಎಸ್.ನಂ.23/1 ನ್ನು ಕೃಷಿಯೇತರ ಜಮೀನಾಗಿ ಪರಿವರ್ತಿಸದ ಕಾರಣ ಅಲ್ಲಿ ಲೇ ಔಟ್ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಲೇ ಔಟ್ ಇದೆ ಎನ್ನುತ್ತಾರೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆರ್.ಎಸ್.ನಂ.23/1 ಕೃಷಿಯೇತರ ಜಮೀನಾಗಿ ಪರಿವರ್ತನೆ ಆಗಿಲ್ಲ, ಅಲ್ಲಿ ಯಾವುದೇ ಲೇ ಔಟ್ ನಕ್ಷೆ ಆಗಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ದಾವಾ ಸ್ವತ್ತಿನ ನಿವೇಶನ ಸಂಖ್ಯೆ 33 ಎಂದು ಸುಳ್ಳು ಬರೆಯಲಾಗಿದೆ ಎಂದರೆ ಸರಿಯಲ್ಲ. ಆದ್ದರಿಂದ ವಾದ ಪತ್ರದಲ್ಲಿ ತಿಳಿಸಿದ ಚೆಕ್ಕುಬಂಧಿ ತಪ್ಪು ಇದೆ ಎಂದರೆ ಸರಿಯಲ್ಲ.

**3.** ದಾವಾ ಸ್ವತ್ತಿನಲ್ಲಿ ಇದ್ದ ಮೊದಲಿನ ಶೆಡ್ ನ್ನು ಬೀಳಿಸಿದ್ದೀರಿ ಎಂದು ತಿಳಿಸಿದ್ದೀರಿ , ಬೀಳಿಸಲು ಪರವಾನಗಿ ಪಡೆದಿಲ್ಲ ಎಂದರೆ ಸಾಕ್ಷಿ ಆ ಶೆಡ್ ನ್ನು ನಾವೇ ಕಟ್ಟಿದ್ದೇವೆ ಎನ್ನುತ್ತಾರೆ. ಶೆಡ್ ನ್ನು ಕಟ್ಟಲು ಗ್ರಾಮ ಪಂಚಾಯಿತಿಯಿಂದ ಪರವಾನಗಿ ಪಡೆದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆರ್.ಎಸ್.ನಂ.23/1 ಪಾರಿಸ್ ದೇವಪ್ಪ ಪಾಟೀಲ್ ರವರ ಪೂರ್ವಜರ ಸ್ವತ್ತು ಎಂದರೆ ಸರಿ. ಆರ್.ಎಸ್.ನಂ.23/1 ಪಾರಿಸ್ ದೇವಪ್ಪ ಪಾಟೀಲ್ ರವರ ಅಣ್ಣ ತಮ್ಮಂದಿರ ಸ್ವತ್ತು ಎಂದರೆ ಸರಿಯಲ್ಲ. ಆರ್.ಎಸ್.ನಂ.23/1 ಪಾರಿಸ್ ದೇವಪ್ಪ ಪಾಟೀಲ್ ಮತ್ತು ಬರ್ಮಣ್ಣ ದೇವಪ್ಪ ಪಾಟೀಲ್ ರವರ ಜಂಟಿ ಸ್ವತ್ತು ಎಂದರೆ ಸಾಕ್ಷಿ ನಮಗೆ ಪಾರಿಸ್ ದೇವಪ್ಪ ಪಾಟೀಲ್ ಮಾತ್ರ ಮಾರಾಟ ಮಾಡಿದ್ದಾರೆ, ಉತಾರದಲ್ಲಿ ಅವರಿಬ್ಬರ ಹೆಸರು ಇದ್ದರೆ ನಾವೇನು ಮಾಡಲು ಆಗುತ್ತದೆ ಎನ್ನುತ್ತಾರೆ. ಖರೀದಿ ಪತ್ರಕ್ಕೆ ಪಾರಿಸ್ ದೇವಪ್ಪ ಪಾಟೀಲ್ ರವರ ಅಣ್ಣ ತಮ್ಮಂದಿರ ಸಹಿ ಪಡೆದಿಲ್ಲ ಎಂದರೆ ಸರಿ. ಪಾರಿಸ್ ದೇವಪ್ಪ ಪಾಟೀಲ್ ಮತ್ತು ಅವರ ಅಣ್ಣ ತಮ್ಮಂದಿರ ಮಧ್ಯೆ ಆದ ಪಾಲು ವಿಭಾಗ ಪತ್ರವನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ

ಎನ್ನುತ್ತಾರೆ. ದಾವಾ ಸ್ವತ್ತನ್ನು ಖರೀದಿಸಲು ಯಾರಾದದ್ದಾರೂ ತಕರಾರು ಇದೆಯೇ ಎಂದು ಸಾರ್ವಜನಿಕ ಪ್ರಕಟಣೆಯನ್ನು ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**